**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** 2025-26ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ ಸಂಖ್ಯೆ-234 ರಲ್ಲಿ ಘೋಷಿಸಿರುವಂತೆ "**ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿರುವ ರಾಷ್ಟ್ರೀಯ ವಿದೇಶಿ ವಿದ್ಯಾರ್ಥಿವೇತನವನ್ನು 20 ಲಕ್ಷಗಳಿಂದ 30 ಲಕ್ಷ ರೂ.ಗಳಿಗೆ ಹೆಚ್ಚಿಸುವ ಬಗ್ಗೆ.**

**ಓದಲಾಗಿದೆ:**
1. 2025-26ನೇ ಸಾಲಿನ ಆಯವ್ಯಯ ಭಾಷಣ ಕಂಡಿಕೆ ಸಂಖ್ಯೆ-234.
2. ಅಲ್ಪಸಂಖ್ಯಾತರ ನಿರ್ದೇಶನಾಲಯದ ಇ-ಕಚೇರಿ ಕಡತ ಸಂಖ್ಯೆ: **DOM/SCH/NOS/5/2025.**

** ** **

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರ.ಸಂ. (1)ರಲ್ಲಿ 2025-26ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ (234)ರಲ್ಲಿ ಈ ಕೆಳಕಂಡಂತೆ ಘೋಷಿಸಲಾಗಿರುತ್ತದೆ.

***"ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿರುವ ರಾಷ್ಟ್ರೀಯ ವಿದೇಶಿ ವಿದ್ಯಾರ್ಥಿವೇತನವನ್ನು 20 ಲಕ್ಷ ರೂ. ಗಳಿಂದ 30 ಲಕ್ಷ ರೂ. ಗಳಿಗೆ ಹೆಚ್ಚಿಸಲಾಗುವುದು"***

ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಗೆ ವಿದೇಶದಲ್ಲಿ ಉನ್ನತ ವ್ಯಾಸಂಗ ಯೋಜನೆಯಡಿ ನೀಡಲಾಗುತ್ತಿರುವ ವಿದ್ಯಾರ್ಥಿವೇತನದ ಮೊತ್ತವನ್ನು ಸಮಾಜ ಕಲ್ಯಾಣ ಇಲಾಖೆಯ ಮಾದರಿಯಲ್ಲಿ ವಿದೇಶಿ ವಿಶ್ವವಿದ್ಯಾಲಯದ ಬ್ಯಾಂಕ್ ಖಾತೆಗೆ ನೇರವಾಗಿ ಜಮೆ ಮಾಡಲು ಅನುಕೂಲವಾಗುವಂತೆ ನಿರ್ದೇಶಕರ ಹೆಸರಿನಲ್ಲಿ ಬ್ಯಾಂಕ್ ಖಾತೆ /ಪಿ.ಡಿ ಖಾತೆ ತೆರೆದು, ಪಿ.ಡಿ ಖಾತೆ/ ಬ್ಯಾಂಕ್ ಖಾತೆ ಮೂಲಕ ವಿದ್ಯಾರ್ಥಿವೇತನ ಪಾವತಿಸಲು ಆದೇಶ ಕೋರಿ ಹಾಗೂ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳ ವಿದೇಶಿ ವಿದ್ಯಾರ್ಥಿವೇತನ ಯೋಜನೆಗೆ ಸಂಬಂಧಿಸಿದಂತೆ, ಹಲವು ಸರ್ಕಾರಿ ಆದೇಶಗಳು ಚಾಲ್ತಿಯಲ್ಲಿರುವುದರಿಂದ ಈ ಎಲ್ಲಾ ಸರ್ಕಾರಿ ಆದೇಶಗಳನ್ನು ಸಂಪೂರ್ಣವಾಗಿ ಪರಿಷ್ಕರಿಸಿ, ಒಂದೇ ಸರ್ಕಾರಿ ಆದೇಶದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ರವರು 2025-26ರ ಆಯವ್ಯಯದ ಭಾಷಣದ ಪ್ಯಾರಾ ಸಂಖ್ಯೆ:234 ರಲ್ಲಿ ಘೋಷಿಸಿದಂತೆ ರಾಷ್ಟ್ರೀಯ ವಿದೇಶಿ ವಿದ್ಯಾರ್ಥಿವೇತನವನ್ನು ರೂ. 20.00 ಲಕ್ಷಗಳಿಂದ ರೂ.30.00 ಲಕ್ಷ ರೂ.ಗಳಿಗೆ ಹೆಚ್ಚಿಸುವ ಸಂಬಂಧ ಮಾರ್ಗಸೂಚಿಗಳ ಕುರಿತು ಸೂಕ್ತ ಸರ್ಕಾರಿ ಆದೇಶ ಹೊರಡಿಸಲು ಕೋರಿ ಮೇಲೆ ಓದಲಾದ ಕ್ರ.ಸಂ(2)ರಲ್ಲಿ ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ ಇವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಎಂಡಬ್ಲ್ಯೂಡಿ 357 ಎಂಡಿಎಸ್ 2025,**
**ಬೆಂಗಳೂರು ದಿನಾಂಕ:17.06.2025**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ 2025-26ರ ಆಯವ್ಯಯದ ಭಾಷಣದ ಕಂಡಿಕೆ-234 ರಲ್ಲಿ ಘೋಷಿಸಿರುವಂತೆ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ವಿದೇಶಿ ವಿದ್ಯಾರ್ಥಿವೇತನವನ್ನು ರೂ. 20.00 (ರೂಪಾಯಿ ಇಪ್ಪತ್ತು ಲಕ್ಷಗಳು ಮಾತ್ರ) ಲಕ್ಷಗಳಿಂದ ರೂ.30.00 (ರೂಪಾಯಿ ಮೂವತ್ತು ಲಕ್ಷಗಳು ಮಾತ್ರ) ಲಕ್ಷಗಳಿಗೆ ಹೆಚ್ಚಿಸಿ, ಈ ಆದೇಶದ ಅನುಬಂಧದಲ್ಲಿರುವಂತೆ ಮಾರ್ಗಸೂಚಿಗಳನ್ನು ಪರಿಷ್ಕರಿಸಿ ಆದೇಶಿಸಲಾಗಿದೆ.

...2.

Scanned with OKEN Scanner

ಸದರಿ ಕಾರ್ಯಕ್ರಮಕ್ಕೆ ತಗಲುವ ವೆಚ್ಚವನ್ನು 2025-26ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿರುವ ಲೆಕ್ಕಶೀರ್ಷಿಕೆ:2225-04-277-0-04 ಅಲ್ಪಸಂಖ್ಯಾತರಿಗಾಗಿ ವಿದ್ಯಾರ್ಥಿ ವೇತನ ಮತ್ತು ಶುಲ್ಕ ಮರುಪಾವತಿ [117- ವಿದ್ಯಾರ್ಥಿ ವೇತನ ಮತ್ತು ಪ್ರೋತ್ಸಾಹ] ರಡಿ ಪ್ರಸಕ್ತ ಸಾಲಿಗೆ ಒದಗಿಸಿರುವ ಅನುದಾನಕ್ಕೆ ಸೀಮಿತವಾಗಿ ಅನುಷ್ಠಾನಗೊಳಿಸತಕ್ಕದ್ದು.

ಈ ಆದೇಶವನ್ನು ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಪಿ.ಡಿ.ಎಸ್. 28 ಐಎಂಎಂ 2025 ದಿನಾಂಕ:23/04/2025 ರಲ್ಲಿ ಹಾಗೂ ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 383 ವೆಚ್ಚ-3/2025, ದಿನಾಂಕ:04.06.2025 ರಲ್ಲಿ ನೀಡಿರುವ ಸಹಮತಿರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯ ಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

17/6/2025

(ಎಸ್. ಎಫಾಸ್ ಪಾಷ)
ಸರ್ಕಾರದ ಅಧೀನ ಕಾರ್ಯದರ್ಶಿ
ಅಲ್ಪಸಂಖ್ಯಾತರ ಕಲ್ಯಾಣ ಹಜ್ ಮತ್ತು ವಕ್ಫ್ ಇಲಾಖೆ

**ಇವರಿಗೆ:**

1. ಮಹಾಲೇಖಪಾಲರು (ಅ ಮತ್ತು ಇ), ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ, ವಸಂತನಗರ, ಬೆಂಗಳೂರು.
3. ಎಲ್ಲಾ ಜಿಲ್ಲೆಯ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ.
4. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ(ವೆಚ್ಚ3&9) ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಅಧೀನ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
6. ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
7. ಸರ್ಕಾರದ ಕಾರ್ಯದರ್ಶಿ ರವರ ಆಪ್ತ ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ, ವಿಕಾಸ ಸೌಧ, ಬೆಂಗಳೂರು.
8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

Scanned with OKEN Scanner

**ಸರ್ಕಾರದ ಆದೇಶ ಸಂಖ್ಯೆ: ಎಂಡಬ್ಲ್ಯೂಡಿ 357 ಎಂಡಿಎಸ್ 2025, ಬೆಂಗಳೂರು ದಿನಾಂಕ:17.06.2025ಕ್ಕೆ ಅನುಬಂಧ**

**ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ವಿದೇಶಿ ವಿದ್ಯಾರ್ಥಿ ವೇತನ ಯೋಜನೆಯಡಿ ರಾಷ್ಟ್ರೀಯ ವಿದೇಶಿ ವಿದ್ಯಾರ್ಥಿವೇತನವನ್ನು ನೀಡಲು QS World University ಪಟ್ಟಿಯಲ್ಲಿನ ಟಾಪ್ 500 Ranking ವಿಶ್ವವಿದ್ಯಾಲಯಗಳಲ್ಲಿ ಈ ಕೆಳಕಂಡ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳನ್ನು ವಿದ್ಯಾರ್ಥಿವೇತನ ಆಯ್ಕೆಗೆ ಪರಿಗಣಿಸಲಾಗುವುದು. ಅಧ್ಯಯನ ಕ್ಷೇತ್ರ/ವಿಷಯಗಳಲ್ಲಿ ಸ್ನಾತಕೋತ್ತರ ಪದವಿ,**

- Engineering/ Architecture.
- Technical.
- Science.
- Management.
- Business Administration.
- Medical/Dental/Psychology.
- Law.
- Economics/Finance/Accountancy.
- Journalism, Humanities, Social Science, Fine Arts.

1. **ಕನಿಷ್ಠ ಶೈಕ್ಷಣಿಕ ಅರ್ಹತೆಗಳು:**

- **ಸ್ನಾತಕೋತ್ತರ ಪದವಿಗೆ:** ಸಂಬಂಧಪಟ್ಟ ಪದವಿಯಲ್ಲಿ ಪ್ರಥಮ ದರ್ಜೆ ಅಥವಾ ಶೇಕಡ 60% ಅಂಕಗಳು ಅಥವಾ ತತ್ಸಮಾನವಾದ ಗ್ರೇಡ್ ಹೊಂದಿರಬೇಕು.
- ಪದವಿ ಕೋರ್ಸಿನಲ್ಲಿ ಶೇಕಡ 60% ಕ್ಕಿಂತ ಹೆಚ್ಚಿನ ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಪಾವತಿಸಿದ ನಂತರ ಅನುದಾನ ಲಭ್ಯವಿದ್ದಲ್ಲಿ ಶೇಕಡ 60% ಕಿಂತ ಕಡಿಮೆ ಅಂಕಗಳನ್ನು ಪಡೆದ ವಿದ್ಯಾರ್ಥಿಗಳ ಅರ್ಜಿಗಳನ್ನು ಸಹ ವಿದ್ಯಾರ್ಥಿವೇತನಕ್ಕೆ ಪರಿಗಣಿಸಲಾಗುವುದು.

2. **ವಯೋಮಿತಿ:**

ವಿದ್ಯಾರ್ಥಿಯು ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಪ್ರವೇಶ ಪಡೆದ ದಿನಾಂಕದಂದು ವಯಸ್ಸು 40 ವರ್ಷ ಮೀರಿರಬಾರದು.

3. **ಆದಾಯ ಮಿತಿ:**

ಸದರಿ ವಿದ್ಯಾರ್ಥಿವೇತನ ಪಡೆಯಲು ವಿದ್ಯಾರ್ಥಿಯ ಕುಟುಂಬದ ವಾರ್ಷಿಕ ವರಮಾನ ರೂ. 16.00 ಲಕ್ಷ ಮೀರಿರಬಾರದು.

ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ಆದಾಯವು ರೂ.8.00 ಲಕ್ಷಗಳ ಒಳಗಿದ್ದಲ್ಲಿ ಗರಿಷ್ಠ 2 ವರ್ಷಗಳಿಗೆ ರೂ.30.00 ಲಕ್ಷಗಳ ಮಿತಿಗೊಳಪಟ್ಟು ವಿದ್ಯಾರ್ಥಿವೇತನ ನೀಡಲಾಗುವುದು. (ಒಂದು ವರ್ಷಕ್ಕೆ ರೂ.15 ಲಕ್ಷದಂತೆ) ಹಾಗೂ ವಿದ್ಯಾರ್ಥಿಯ ಕುಟುಂಬದ ವಾರ್ಷಿಕ ಆದಾಯವು ರೂ.8.00 ಲಕ್ಷಗಳಿಂದ ರೂ.16.00 ಲಕ್ಷಗಳ ಒಳಗಿದ್ದಲ್ಲಿ ಗರಿಷ್ಠ 2 ವರ್ಷಗಳ ಅವಧಿಗೆ 15 ಲಕ್ಷ ರೂ.ಗಳ ಮಿತಿಗೊಳಪಟ್ಟು ವಿದ್ಯಾರ್ಥಿವೇತನವನ್ನು ಡಿ.ಬಿ.ಟಿ ಮೂಲಕ ಪಾವತಿಸಲಾಗುವುದು. (ಒಂದು ವರ್ಷಕ್ಕೆ ರೂ.7.50 ಲಕ್ಷದಂತೆ)

....4.

Scanned with OKEN Scanner

4. **ಕೋರ್ಸ್ ಅವಧಿ:**

- ವಿದ್ಯಾರ್ಥಿಯ ಕೋರ್ಸ್ ನ ಅವಧಿಯನ್ನು ಪರಿಗಣಿಸಿ ಕೇವಲ 1 ವರ್ಷದ / 2 ವರ್ಷದ ಅವಧಿಗೆ ಮಾತ್ರ ವಿದ್ಯಾರ್ಥಿವೇತನ ಪಾವತಿಸಲು ಕ್ರಮವಹಿಸುವುದು.
- ಸ್ನಾತಕೋತ್ತರ ಪದವಿ ಅಧ್ಯಯನ ಮಾಡುವ ಅಭ್ಯರ್ಥಿಗಳಿಗೆ ಗರಿಷ್ಠ 2 ವರ್ಷ ಧನ ಸಹಾಯ ಒದಗಿಸಲಾಗುತ್ತದೆ. ಎರಡು ಅಥವಾ ಮೂರು ಸೆಮಿಸ್ಟರ್ ನ ಸ್ನಾತಕೋತ್ತರ ಪದವಿಯಾಗಿದ್ದರೆ, ಎರಡು ಅಥವಾ ಮೂರು ಸೆಮಿಸ್ಟರ್ ಗೆ ಮಾತ್ರ ವಿದ್ಯಾರ್ಥಿವೇತನ ನೀಡಲಾಗುವುದು.
- ವಿದ್ಯಾರ್ಥಿಯ ಕೋರ್ಸ್ ನ ಅಂತಿಮ ವರ್ಷದ ವ್ಯಾಸಂಗದ ಅವಧಿಯು 6 ತಿಂಗಳು ಮತ್ತು ಅದಕ್ಕಿಂತ ಕಡಿಮೆಯಾಗಿದ್ದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಗರಿಷ್ಠ ರೂ.7.50 ಲಕ್ಷ ಅಥವಾ ವಾಸ್ತವ ವೆಚ್ಚ ಇವೆರಡರಲ್ಲಿ ಯಾವುದು ಕಡಿಮೆಯೋ ಆ ಮೊತ್ತವನ್ನು ಮಂಜೂರು ಮಾಡುವುದು.

5. **ಇತರೆ ಕಡ್ಡಾಯ ಷರತ್ತುಗಳು:**

I. ವಿದ್ಯಾರ್ಥಿಯು ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು. (ಕನಿಷ್ಠ 10 ವರ್ಷಗಳು ಕರ್ನಾಟಕ ರಾಜ್ಯದಲ್ಲಿ ವ್ಯಾಸಂಗ ಮಾಡಿರಬೇಕು, ಹಾಗೂ ವ್ಯಾಸಂಗ ಮಾಡಿದ ಬಗ್ಗೆ ಶೈಕ್ಷಣಿಕ ದಾಖಲೆಗಳನ್ನು ಸಲ್ಲಿಸತಕ್ಕದ್ದು)

II. ವಿದ್ಯಾರ್ಥಿಯು ಅಲ್ಪಸಂಖ್ಯಾತರ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಸಿಖ್, ಬೌದ್ಧ ಮತ್ತು ಪಾರ್ಸಿ ಸಮುದಾಯಕ್ಕೆ ಸೇರಿದವರಾಗಿರಬೇಕು.

III. ಈಗಾಗಲೇ ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಹಿಂದಿನ ವರ್ಷಗಳಲ್ಲಿ ಪ್ರವೇಶ ಪಡೆದು ಪ್ರಸಕ್ತ ಸಾಲಿನಲ್ಲಿ ವಿದ್ಯಾರ್ಥಿವೇತನಕ್ಕಾಗಿ ಅರ್ಜಿ ಸಲ್ಲಿಸಿದ್ದಲ್ಲಿ, ಅಂತಹ ವಿದ್ಯಾರ್ಥಿಗೆ ಪ್ರಸಕ್ತ ಶೈಕ್ಷಣಿಕ ವರ್ಷದಿಂದ ಕೋರ್ಸ್ ಅವಧಿಯಲ್ಲಿ ಗರಿಷ್ಠ 2 ವರ್ಷಗಳ ಅವಧಿಗೆ ವಿದ್ಯಾರ್ಥಿವೇತನ ಪಾವತಿಸಲಾಗುವುದು.

IV. ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸುವ ಅಭ್ಯರ್ಥಿಯು ಸರ್ಕಾರ ನಿಗದಿಪಡಿಸಿದ ಭಾಷೆಯಲ್ಲಿ, ವಿದ್ಯಾರ್ಥಿಗೆ ಪಾವತಿಸಲಾದ ವಿದ್ಯಾರ್ಥಿವೇತನವನ್ನು ಒಂದು ವೇಳೆ ದುರ್ಬಳಕೆ ಮಾಡಿಕೊಂಡಿದ್ದಲ್ಲಿ ಅಥವಾ ವಿದ್ಯಾಭ್ಯಾಸವನ್ನು ಅರ್ಧಕ್ಕೆ ಮೊಟಕುಗೊಳಿಸಿದಲ್ಲಿ ಇಲಾಖೆಯಿಂದ ಭರಿಸಲಾದ ಒಟ್ಟು ಮೊತ್ತವನ್ನು,12% ಬಡ್ಡಿ ಸಮೇತವಾಗಿ Surety Bond ಗಳನ್ನು ನೀಡಿದ ವ್ಯಕ್ತಿಗಳು ಭರಿಸಲು ಬದ್ಧರಾಗಿರುತ್ತಾರೆಂದು ಪ್ರತ್ಯೇಕವಾಗಿ 2 Surety Bond ಗಳನ್ನು ಇಲಾಖೆಗೆ ಸಲ್ಲಿಸಬೇಕು.

V. ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸುವ ಅಭ್ಯರ್ಥಿಯು ಸಂಬಂಧಪಟ್ಟ ದೇಶದಲ್ಲಿ ಚಾಲ್ತಿಯಲ್ಲಿರುವ ಕಾನೂನುಗಳನ್ನು ಪಾಲಿಸುತ್ತೇನೆಂದು, ಗೌರವಿಸುತ್ತೇನೆಂದು ಹಾಗೂ ಒಂದು ವೇಳೆ ವಿದೇಶದಲ್ಲಿನ ಕಾನೂನು ಸುವ್ಯವಸ್ಥೆ ಪಾಲಿಸದೆ ಅವರ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಿದ್ದಲ್ಲಿ ತಾನೇ ನೇರ ಹೊಣೆಗಾರನಾಗಿರುತ್ತೇನೆ ಹೊರತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯು ಜವಾಬ್ದಾರರಾಗಿರುವುದಿಲ್ಲವೆಂದು ನೋಟರಿ ಮೂಲಕ ಮುಚ್ಚಳಿಕೆ ಪತ್ರವನ್ನು ಸಲ್ಲಿಸತಕ್ಕದ್ದು.

VI. ಅಭ್ಯರ್ಥಿಯು ವಿದ್ಯಾರ್ಥಿವೇತನಕ್ಕಾಗಿ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಪ್ರವೇಶ ಪಡೆದ ವಿಶ್ವವಿದ್ಯಾಲಯದಲ್ಲಿಯೇ ವಿದ್ಯಾಭ್ಯಾಸವನ್ನು ಪೂರ್ಣಗೊಳಿಸುತ್ತೇನೆ, ಪ್ರವೇಶ ಪಡೆದ ನಂತರ ಕೋರ್ಸ್/ವಿಶ್ವವಿದ್ಯಾಲಯವನ್ನು ಬದಲಾಯಿಸುವುದಿಲ್ಲವೆಂದು ನೋಟರಿ ಮೂಲಕ ಮುಚ್ಚಳಿಕೆ ಪತ್ರವನ್ನು ಸಲ್ಲಿಸಬೇಕು.

VII. ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸುವ ಅಭ್ಯರ್ಥಿಯು ಭಾರತದ ಜೊತೆ ಉತ್ತಮ ರಾಜತಾಂತ್ರಿಕ ಸಂಬಂಧವನ್ನು ಹೊಂದಿರುವ ದೇಶದ ಮಾನ್ಯತೆ ಪಡೆದ ವಿಶ್ವವಿದ್ಯಾಲಯಗಳು/ಸಂಸ್ಥೆಗಳಲ್ಲಿ ತನ್ನ ಸ್ವಂತ ಪ್ರಯತ್ನದೊಂದಿಗೆ ಪ್ರವೇಶ ಪಡೆಯತಕ್ಕದ್ದು, ಯಾವುದೇ ಕಾರಣಕ್ಕೂ ಇಲಾಖೆಯಿಂದ ಮುಂಗಡವಾಗಿ ಶುಲ್ಕ ಭರಿಸಲಾಗುವುದಿಲ್ಲ.

....5.

Scanned with OKEN Scanner

VIII. ವಿದ್ಯಾರ್ಥಿಯು ಸದರಿ ಯೋಜನೆಯಡಿ ಹೆಚ್ಚುವರಿಯಾಗಿ ವಿದ್ಯಾರ್ಥಿವೇತನ ಪಡೆದಿದ್ದಲ್ಲಿ, ಅಥವಾ ವಿದೇಶಿ ವಿದ್ಯಾರ್ಥಿವೇತನ ಯೋಜನೆಯ ಹೊರತಾಗಿ ಸರ್ಕಾರದ ಯಾವುದೇ ಮೂಲದಿಂದ ಹೆಚ್ಚುವರಿ ಆರ್ಥಿಕ ಸಹಾಯಧನ ಪಡೆದಿದ್ದಲ್ಲಿ ಸಂಬಂಧಪಟ್ಟ ವಿದ್ಯಾರ್ಥಿ ಅಥವಾ Surety Bond ಗಳನ್ನು ನೀಡಿದ ವ್ಯಕ್ತಿಗಳು ಇಲಾಖೆಗೆ ಭರಿಸಬೇಕಾಗಿರುತ್ತದೆ.

IX. ವಿದ್ಯಾರ್ಥಿಯು ವಿಶ್ವವಿದ್ಯಾಲಯದ ಪೂರ್ಣಾವಧಿಯ ಕೋರ್ಸನಲ್ಲಿ ವ್ಯಾಸಂಗ ಮಾಡತಕ್ಕದ್ದು, ಯಾವುದೇ ಕಾರಣಕ್ಕೂ ಆನ್ ಲೈನ್/ದೂರ ಶಿಕ್ಷಣ/ಅರೆಕಾಲಿಕ ಕೋರ್ಸಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳನ್ನು ಸದರಿ ವಿದ್ಯಾರ್ಥಿ ಯೋಜನೆಯಡಿ ಪರಿಗಣಿಸಲಾಗುವುದಿಲ್ಲ.

X. ಸದರಿ ಯೋಜನೆಯಡಿ ಅರ್ಜಿ ಸಲ್ಲಿಸಿದ ಸಂದರ್ಭದಿಂದ ಅಭ್ಯರ್ಥಿಯ ಕೋರ್ಸ್ ನ ಸಂಪೂರ್ಣ ಅವಧಿಯಲ್ಲಿ ಯಾವುದೇ ಸಮಸ್ಯೆಗಳು ಉದ್ಭವಿಸಿದ್ದಲ್ಲಿ ಇಲಾಖೆ/ಸರ್ಕಾರದ ತೀರ್ಮಾನವೇ ಅಂತಿಮವಾಗಿರುತ್ತದೆ.

XI. ಅಭ್ಯರ್ಥಿಯು ವಿದೇಶಕ್ಕೆ ತೆರಳಿದ ತರುವಾಯ ಉಂಟಾಗಬಹುದಾದ ಆಕಸ್ಮಿಕ ದುರ್ಘಟನೆ, ಅನಾರೋಗ್ಯ, ವ್ಯಯಕ್ತಿಕ ಸಮಸ್ಯೆಗಳಿಗೆ ಇಲಾಖೆ ಹೊಣೆಯಾಗುವುದಿಲ್ಲ. ಅಭ್ಯರ್ಥಿಯು ತನ್ನ ಸ್ವಂತ ಶಕ್ತಿ ಹಾಗೂ ಶ್ರಮದಿಂದ ಅವುಗಳನ್ನು ಪರಿಹರಿಸಿಕೊಳ್ಳತಕ್ಕದ್ದು.

XII. ಅಭ್ಯರ್ಥಿಯು ಪ್ರವೇಶ ಪಡೆದ ವಿಶ್ವವಿದ್ಯಾಲಯದಿಂದ ಪ್ರತಿ 06 ತಿಂಗಳಿಗೊಮ್ಮೆ ತೃಪ್ತಿಕರ ಪ್ರಗತಿ ವರದಿಯನ್ನು ಇಲಾಖೆಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಯಾವುದಾದರೂ ಪ್ರತಿಕೂಲ ವರದಿ ಕಂಡುಬಂದಲ್ಲಿ ಇಲಾಖೆಯಿಂದ ನೀಡಲಾಗುವ ವಿದ್ಯಾರ್ಥಿವೇತನವನ್ನು ಸ್ಥಗಿತಗೊಳಿಸಲಾಗುವುದು.

XIII. ಆಯ್ಕೆಯಾದ ವಿದ್ಯಾರ್ಥಿಗಳು ವಿಶ್ವವಿದ್ಯಾಲಯವು ನಿಗದಿಪಡಿಸಿದ ಅವಧಿಯೊಳಗಾಗಿ ಕೋರ್ಸನ್ನು ಮುಕ್ತಾಯಗೊಳಿಸತಕ್ಕದ್ದು. ಒಂದು ವೇಳೆ ನೈಸರ್ಗಿಕ ವಿಪತ್ತು, ವೈದ್ಯಕೀಯ ಕಾರಣ ಮತ್ತು Forced Events ಸಂದರ್ಭಗಳಲ್ಲಿ ಅಂತಹ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯ ವಿಭಾಗದ ಮುಖ್ಯಸ್ಥರು/ಮೇಲ್ಪಟ್ಟ ಅಧಿಕಾರಿಗಳಿಂದ ವಿದ್ಯಾಭ್ಯಾಸ ಮುಂದುವರೆಸಿರುವ ಕುರಿತು ಅಧಿಕೃತ ದಾಖಲೆಗಳನ್ನು ನೀಡಿದ್ದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಒಟ್ಟಾರೆಯಾಗಿ ಕೋರ್ಸ್ ನ ಅವಧಿಯಲ್ಲಿ 2 ವರ್ಷಗಳ ವಿದ್ಯಾರ್ಥಿವೇತನ ಪಾವತಿಸಲು ಕ್ರಮ ಕೈಗೊಳ್ಳಲಾಗುವುದು.

XIV. ಒಂದು ವೇಳೆ ವಿದ್ಯಾರ್ಥಿಯು ಮುಚ್ಚಳಿಕೆ ಪತ್ರದಲ್ಲಿ ಘೋಷಿಸಿದ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ, ವಿಶ್ವವಿದ್ಯಾಲಯದಿಂದ ಪ್ರತಿಕೂಲ ವರದಿ ಸ್ವೀಕೃತವಾದಲ್ಲಿ ಹಾಗೂ ವಿದ್ಯಾರ್ಥಿಯು ತನ್ನ ಕೋರ್ಸ್ ನ ಅವಧಿಯಲ್ಲಿ ಇಲಾಖೆ/ಸರ್ಕಾರಕ್ಕೆ ತಿಳಿಸದೇ ವ್ಯಾಸಂಗವನ್ನು ಅರ್ಧಕ್ಕೆ ಮೊಟಕುಗೊಳಿಸಿದ್ದಲ್ಲಿ ಇಲಾಖೆಯಿಂದ ಭರಿಸಲಾದ ದಿನಾಂಕದಿಂದ ಶೇಕಡ 12% ರಷ್ಟು ಬಡ್ಡಿ ಸಮೇತವಾಗಿ ವಿದ್ಯಾರ್ಥಿ ಅಥವಾ Surety Bond ಗಳನ್ನು ನೀಡಿದ ವ್ಯಕ್ತಿಗಳಿಂದ ವಸೂಲಿ ಮಾಡಲಾಗುವುದು. (ವಸೂಲಿ ಮಾಡುವ ಪ್ರಾಧಿಕಾರವು ವಿದ್ಯಾರ್ಥಿಯ ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳಾಗಿರುತ್ತಾರೆ.)

XV. ಅರ್ಜಿ ಸಲ್ಲಿಸಿದ ತರುವಾಯ ವಿದ್ಯಾರ್ಥಿವೇತನದ ಆಯ್ಕೆ ಪ್ರಕ್ರಿಯೆ ಪೂರ್ಣಗೊಳ್ಳುವಷ್ಟರಲ್ಲಿ ತರಗತಿಗಳು ಪ್ರಾರಂಭವಾದ ಹಿನ್ನೆಲೆಯಲ್ಲಿ ವಿದ್ಯಾರ್ಥಿಯು ವಿದೇಶಕ್ಕೆ ತೆರಳಿದ ಸಂದರ್ಭದಲ್ಲಿ ಪೋಷಕರು ಮೂಲ ದಾಖಲೆಗಳೊಂದಿಗೆ ದಾಖಲೆ ಪರಿಶೀಲನೆಗೆ ಹಾಜರಾಗಲು ಅವಕಾಶವಿರುತ್ತದೆ.

XVI. ವಿದ್ಯಾರ್ಥಿಯು ವಿದೇಶಿ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿರುವ ಬಗ್ಗೆ ದೃಢೀಕರಣ ಪಡೆದ ನಂತರ ವಿದ್ಯಾರ್ಥಿವೇತನ ಪಾವತಿಸಲು ಕ್ರಮಕೈಗೊಳ್ಳಲಾಗುವುದು.

XVII. ಅಲ್ಪಸಂಖ್ಯಾತರ ಸಮುದಾಯದ ಸರ್ಕಾರಿ ನೌಕರರು QS/ Top 10 Ranking ರಲ್ಲಿನ ವಿಶ್ವ ವಿದ್ಯಾಲಯಗಳಲ್ಲಿ ಪ್ರವೇಶ ಪಡೆದು ವ್ಯಾಸಂಗ ಮಾಡುತ್ತಿದ್ದಲ್ಲಿ ಅಂತಹ ಅಭ್ಯರ್ಥಿಗಳಿಗೆ ಆದಾಯ ಮಿತಿಯಲ್ಲಿ ವಿನಾಯಿತಿ ನೀಡಿ ವಿದ್ಯಾರ್ಥಿವೇತನ ಪಾವತಿಸಲು ಕ್ರಮ ಕೈಗೊಳ್ಳಲಾಗುವುದು.

XVIII. ವಿದ್ಯಾರ್ಥಿಯ ತಂದೆ ಮತ್ತು ತಾಯಿ ಇಬ್ಬರೂ ಅಥವಾ ಇಬ್ಬರಲ್ಲಿ ಒಬ್ಬರು ಕೇಂದ್ರ/ ರಾಜ್ಯ / ಅರೆ ಸರ್ಕಾರಿ ಸಂಸ್ಥೆಯಲ್ಲಿ ಗ್ರೂಪ್-ಡಿ ಸಿಬ್ಬಂದಿಯಾಗಿದ್ದರೆ ಆದಾಯ ಮಿತಿಯಲ್ಲಿ ಸಂಪೂರ್ಣ ವಿನಾಯಿತಿ ನೀಡಲಾಗುವುದು.

Scanned with OKEN Scanner

6. **ಆರ್ಥಿಕ ಸಹಾಯ:**

ವಿದೇಶದಲ್ಲಿ ಉನ್ನತ ವ್ಯಾಸಂಗಕ್ಕಾಗಿ ಆಯ್ಕೆಯಾದ ಅಲ್ಪಸಂಖ್ಯಾತರ ವಿದ್ಯಾರ್ಥಿಯ ಕುಟುಂಬದ ವಾರ್ಷಿಕ ಆದಾಯವು ರೂ.8.00 ಲಕ್ಷಗಳ ಒಳಗಿದ್ದಲ್ಲಿ ಗರಿಷ್ಟ ರೂ.30.00 ಲಕ್ಷಗಳ ವಿದ್ಯಾರ್ಥಿವೇತನ ನೀಡಲು (ಒಂದು ವರ್ಷಕ್ಕೆ 15 ಲಕ್ಷಗಳಂತೆ ಗರಿಷ್ಟ 2 ವರ್ಷಗಳ ಅವಧಿಗೆ) ಹಾಗೂ ವಿದ್ಯಾರ್ಥಿಯ ಕುಟುಂಬದ ವಾರ್ಷಿಕ ಆದಾಯವು ರೂ.8.00 ಲಕ್ಷಗಳಿಂದ 16 ಲಕ್ಷಗಳ ಒಳಗಿದ್ದಲ್ಲಿ ಗರಿಷ್ಟ 15 ಲಕ್ಷ ರೂ.ಗಳ ವಿದ್ಯಾರ್ಥಿವೇತನ ನೀಡಲು (ಒಂದು ವರ್ಷಕ್ಕೆ ರೂ.7.50 ಲಕ್ಷಗಳಂತೆ ಗರಿಷ್ಟ 2 ವರ್ಷಗಳ ವರೆಗೆ) ಆಯಾ ಆರ್ಥಿಕ ವರ್ಷದಲ್ಲಿ ಒದಗಿಸಲಾದ ಅನುದಾನ/ಅನುದಾನದ ಲಭ್ಯತೆಯನುಸಾರ ಡಿ.ಬಿ.ಟಿ ಮೂಲಕ ವಿದ್ಯಾರ್ಥಿವೇತನವನ್ನು ಪಾವತಿಸಲಾಗುವುದು. (ಭಾರತದಿಂದ ವಿದೇಶಕ್ಕೆ ತೆರಳಲು ವಿಮಾನ ಪ್ರಯಾಣ ದರ, ಪ್ರವೇಶ ಶುಲ್ಕ, Tuition Fees ಹಾಗೂ Living Expenses / maintenance expense ಸಹ ಒಳಗೊಂಡಿರುತ್ತದೆ)

7. **ಆಯ್ಕೆಯ ವಿಧಾನ**

- ಆಯಾ ಸಾಲಿನಲ್ಲಿ ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ ಇವರು ನಿಗಧಿತ ಸಮಯಕ್ಕೆ ವ್ಯಾಪಕ ಪ್ರಚಾರದೊಂದಿಗೆ ಆನ್ ಲೈನ್ ಮೂಲಕ ಅರ್ಜಿ ಅಹ್ವಾನಿಸಿ ಅರ್ಹ ವಿದ್ಯಾರ್ಥಿಗಳಿಗೆ ಡಿ.ಬಿ.ಟಿ ಮೂಲಕ ವಿದ್ಯಾರ್ಥಿವೇತನವನ್ನು ಪಾವತಿಸಲು ನಿರ್ದೇಶನಾಲಯದ ಹಂತದಲ್ಲಿಯೇ ಕ್ರಮಕೈಗೊಳ್ಳತಕ್ಕದ್ದು.
- ವಿದ್ಯಾರ್ಥಿಯು ಸಲ್ಲಿಸಲಾದ ದಾಖಲಾತಿಗಳ ಆಧಾರದ ಮೇಲೆ ಅರ್ಜಿಯನ್ನು ಅನುಮೋದಿಸುವ ಹಾಗೂ ತಿರಸ್ಕರಿಸುವ ಅಧಿಕಾರ ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು ರವರಿಗೆ ಇರುತ್ತದೆ.
- ವಿದ್ಯಾರ್ಥಿ/ಫಲಾನುಭವಿಗಳ ಗುರಿಯನ್ನು ಆಯಾ ವರ್ಷದಲ್ಲಿ ಒದಗಿಸಿದ/ಲಭ್ಯವಿರುವ ಅನುದಾನದ ಮಿತಿಯಲ್ಲಿ ನಿಗದಿಪಡಿಸಿತಕ್ಕದ್ದು

8. **ವಿಶೇಷ ಅರ್ಹತೆ:**

ಅಲ್ಪಸಂಖ್ಯಾತರ ಸಮುದಾಯದ ಅಭ್ಯರ್ಥಿಯು ಶೈಕ್ಷಣಿಕ, ಸಾಂಸ್ಕೃತಿಕ, ಕ್ರೀಡಾ ಕ್ಷೇತ್ರದಲ್ಲಿ ರಾಷ್ಟ್ರೀಯ & ಅಂತರಾಷ್ಟ್ರೀಯ ಮಟ್ಟದಲ್ಲಿ ಅಪ್ರತಿಮ ಸಾಧನೆ ಮಾಡಿದವರಾಗಿದ್ದಲ್ಲಿ, ಅಂತಹ ಅಭ್ಯರ್ಥಿಗಳಿಗೆ ಕೆಲವು ಅರ್ಹತೆಯ ಮಾನದಂಡಗಳ ವಿನಾಯಿತಿ ನೀಡಿ ವಿದ್ಯಾರ್ಥಿವೇತನ ಪಾವತಿಸುವ ಅಧಿಕಾರ ನಿರ್ದೇಶಕರ ಅಧ್ಯಕ್ಷತೆಯಲ್ಲಿ ರಚಿಸಲಾಗುವ ಅಲ್ಪಸಂಖ್ಯಾತರ ನಿರ್ದೇಶನಾಲಯದ ಸಮಿತಿಗೆ ಇರುತ್ತದೆ.

9. **ವಿದೇಶಿ ವಿದ್ಯಾರ್ಥಿವೇತನ ಯೋಜನೆಯಡಿ ಕಡ್ಡಾಯವಾಗಿ ಸಲ್ಲಿಸಬೇಕಾದ ಅವಶ್ಯಕ ದಾಖಲಾತಿಗಳು:**

- ಅಭ್ಯರ್ಥಿಯ SSLC ಅಂಕಪಟ್ಟಿ, ಅಂತಿಮ ವರ್ಷದ ಪದವಿ ಅಂಕಪಟ್ಟಿ.
- ತಹಶೀಲ್ದಾರರಿಂದ ಪಡೆದ ವಿದ್ಯಾರ್ಥಿಯ ವಾಸಸ್ಥಳ ಪ್ರಮಾಣ ಪತ್ರ ಹಾಗೂ ಚಾಲ್ತಿಯಲ್ಲಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರ.
- VISA, PASSPORT & BOARDING PASS, AIR TICKET
- ವಿದೇಶಿ ವಿಶ್ವವಿದ್ಯಾಲಯದಲ್ಲಿ ಸಂಬಂಧಪಟ್ಟ ಕೋರ್ಸ್ ಗೆ ಪ್ರವೇಶ ಪಡೆಯಲು ಭರಿಸಲಾದ Admission/Tuition Fees/Others fees ಗಳ ಶುಲ್ಕ ಪಾವತಿ ರಶೀದಿ.
- ವಿಶ್ವವಿದ್ಯಾಲಯವು ನೀಡಿದ Unconditional Offer Letter/ I20/CAS ಹಾಗೂ ಪ್ರವೇಶಕ್ಕೆ ಸಂಬಂಧಿಸಿದ ಇತರೆ ದಾಖಲಾತಿಗಳು.
- Affidavit and Surety Bonds, Room Rent Paid Receipt, Rent Agreement, University Student ID Card.

Scanned with OKEN Scanner

10. **ಸುಳ್ಳು ಮಾಹಿತಿ ಸಲ್ಲಿಸಿದ್ದಲ್ಲಿ**

ರಾಷ್ಟ್ರೀಯ ವಿದೇಶಿ ವಿದ್ಯಾರ್ಥಿವೇತನ ಯೋಜನೆಯಡಿ ಒಂದು ವೇಳೆ ವಿದ್ಯಾರ್ಥಿಯು ತಪ್ಪು/ ದೋಷಪೂರಿತ/ಸುಳ್ಳು ಮಾಹಿತಿ ನೀಡಿ ವಿದ್ಯಾರ್ಥಿ ವೇತನಕ್ಕೆ ಆಯ್ಕೆಯಾಗಿದ್ದಲ್ಲಿ ಅಂತಹ ವಿದ್ಯಾರ್ಥಿಗೆ ಯಾವುದೇ ನೋಟಿಸ್ ನೀಡದೆ ವಿದ್ಯಾರ್ಥಿವೇತನವನ್ನು ಸ್ಥಗಿತಗೊಳಿಸುವ ಹಾಗೂ ಕ್ರಿಮಿನಲ್ ಮೊಕದ್ದೊಮೆ ಹೂಡುವ ಅಧಿಕಾರ ಸರ್ಕಾರ/ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ಇರುತ್ತದೆ.

17/6/2025

(ಎಸ್. ಎಜಾಸ್ ಪಾಷ)
ಸರ್ಕಾರದ ಅಧೀನ ಕಾರ್ಯದರ್ಶಿ
ಅಲ್ಪಸಂಖ್ಯಾತರ ಕಲ್ಯಾಣ ಹಜ್ ಮತ್ತು
ವಕ್ಫ್ ಇಲಾಖೆ

Scanned with OKEN Scanner